# 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS 76/2019** **PW- 2**

ದಿಃ **09.06.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ 3 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ ಎಮ್ ಎಸ್ ಬಿ ವಕೀಲರಿಂದಃ**

ನ್ಯಾಯಾಲಯದಿಂದ ಈ ದಾವೆಗೆ ಸಂಬಂದಪಟ್ಟಂತೆ ಸಮನ್ಸ ಬಂದಿಲ್ಲ. ಈ ದಾವೆಯ ಬಗ್ಗೆ ದಾವೆಯನ್ನು ಸಲ್ಲಿಸಿದವರು ನನಗೆ ಹೇಳಿದ್ದಾರೆ. ನನ್ನ ಹೆಂಡತಿ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ನನ್ನ ಹೆಂಡತಿ ಕರೆದುಕೊಂಡು ಬಂದಿದ್ದರಿಂದ ನಾನು ಸಾಕ್ಷಿ ಹೇಳಲು ಬಂದಿದ್ದೇನೆ. ನನ್ನ ಮುಖ್ಯ ಹೇಳಿಕೆಯಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಹಳೇಯ ಬೀಗರು ಅಂತಾ ಬರೆಸಿದ್ದು ಅವರು ಹೇಗೆ ಸಂಬಂಧಿಕರು ಅಂತಾ ಬರೆಸಿಲ್ಲ ಎಂದರೆ ಸಾಕ್ಷಿ ಬರೆಸಿದ್ದೇವೆ ಎಂದು ನುಡಿಯುತ್ತಾರೆ. ನನ್ನ ಸೋದರ ಅತ್ತೆಯ ಹೆಸರು ನಾಗಮ್ಮ. ಅಣ್ಣನ ಹೆಂಡತಿಗೆ ಅತ್ತಿಗೆ ಅಂತಾ ಕರೆಯುತ್ತಾರೆ ಎಂದರೆ ಸರಿ. ಮುಖ್ಯ ಹೇಳಿಕೆಯಲ್ಲಿ ಅತ್ತಿಗೆ ಅಂತಾ ಬರೆಸಿರುವುದು mistake ಇಂದ ಆಗಿದೆ ಆದರೆ ಅತ್ತೆ ಆಗಬೇಕು. ನನ್ನ ಮುಖ್ಯ ಹೇಳಿಕೆಯ ಪ್ರಮಾಣ ಪತ್ರವನ್ನು ವಕೀಲರೆ ಮಾಡಿರುತ್ತಾರೆ. ನಾನೇ ಹೇಳಿ ಬರೆಸಿರುತ್ತೇನೆ. ನಾನು ಓದಿ ನೋಡಿ ತಿಳಿದುಕೊಂಡೆ ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದೇನೆ.

2. 1 ನೇ ಪ್ರತಿವಾದಿಯ ಮದುವೆ 2 ನೇ ಪ್ರತಿವಾದಿಯ ಜೊತೆ ಯಾವ ಧರ್ಮದ ಪ್ರಕಾರ ಯಾವ ತಾರಿಖಿಗೆ ಯಾವ ಸ್ಥಳದಲ್ಲಿ ನೇರವೇರಿತು ಎನ್ನುವುದನ್ನು ಹಾಗೂ ಯಾವ ಸ್ವಾಮಿಗಳು ಮದುವೆ ಮಾಡಿಸಿದರು ಎನ್ನುವುದನ್ನು ಬರೆಸಿಲ್ಲ ಆದರೆ ಮದುವೆ ಆದ ಬಗ್ಗೆ ಬರೆಸಿದ್ದೇನೆ. ಮೃತ್ಯು ಪತ್ರವನ್ನು ಸರ್ವೆ ನಂ.69 ರ ಬಗ್ಗೆ ಬರೆಸಿದೆ. ಸನ್ 2011 ರಲ್ಲಿ ಮೃತ್ಯು ಪತ್ರ ಬರೆಸಿದೆ ತಿಂಗಳು ದಿನಾಂಕ ಗೊತ್ತಿಲ್ಲ. ನನ್ನ ಮುಖ್ಯ ಹೇಳಿಕೆಯಲ್ಲಿ ಸರ್ವೆ ನಂಬರ ಬಗ್ಗೆ ಮತ್ತು ಆಸ್ತಿಯ ವಿವರಣೆಯ ಬಗ್ಗೆ ಬರೆಸಿಲ್ಲ. ನಾಗವ್ವ ಯಾವಾಗ ತೀರಿಕೊಂಡಳು ಎನ್ನುವುದನ್ನು ಬರೆಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 2019 ರಲ್ಲಿ ತೀರಿಕೊಂಡಿರುತ್ತಾರೆ ಅಂತಾ ನುಡಿಯುತ್ತಾರೆ. ನಮ್ಮ ಮದುವೆಯ ದಿನಾಂಕ ಬರೆಸಿಲ್ಲ ಎಂದರೆ

ಸರಿ. ನಮ್ಮ ಮದುವೆಯನ್ನು ನಮ್ಮ ಹಿರಿಯರು ಮಾಡಿದ್ದಾರೆ. ಆ ಮದುವೆಗೆ 1 ನೇ ಪ್ರತಿವಾದಿ ಬಂದ ಬಗ್ಗೆ ಬರೆಸಿಲ್ಲ ಎಂದರೆ ಸರಿ. ಮದುವೆ ಆದಾಗ ತಂದೆ ತಾಯಿ ಧಾರೆ ಎರೆದುಕೊಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಚಿಕ್ಕಪ್ಪ ಅಥವಾ ಚಿಕ್ಕಮ್ಮ ಧಾರೆ ಎರೆದುಕೊಡುತ್ತಾರೆ ಎಂದು ನುಡಿಯುತ್ತಾರೆ. ಚಿಕ್ಕಪ್ಪ ಅಥವಾ ಚಿಕ್ಕಮ್ಮ ದಾರೆ ಎರೆದುಕೊಡುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಮದುವೆಯಲ್ಲಿ 1 ನೇ ಪ್ರತಿವಾದಿ ಇದ್ದ ಎನ್ನುವ ಬಗ್ಗೆ ಮುಖ್ಯ ಹೇಳಿಕೆಯಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿ.

3. ದಾವಾ ಆಸ್ತಿ ಸರ್ವೆ ನಂ.69/5, 69/3, 135/3 ಅಥವಾ 4 ಇದೆ. ಎಲ್ಲಾ ಜಮೀನುಗಳ ಚಕಬಂದಿ ಗೊತ್ತಿಲ್ಲ. ದಾವಾ ಆಸ್ತಿಗಳು 4 ತಲೆಮಾರಿನಿಂದ ಬಂದ ಬಗ್ಗೆ ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದೇನೆ. ದಾವಾ ಆಸ್ತಿಗಳಿಗೆ ಮೂಲ ಮಾಲೀಕರು ಚನ್ನಮ್ಮ. ಚನ್ನಮ್ಮನ ನಂತರ ಅವರ ಮಕ್ಕಳಾದ ನಾಗಪ್ಪ ಮತ್ತು ನಿಂಗಮ್ಮ ಇವರಿಗೆ ದಾವಾ ಆಸ್ತಿಗಳು ಬಂದವು. ದಾವಾ ಆಸ್ತಿಗಳು ಚನ್ನಮ್ಮ ಇವರ ಸ್ತ್ರಿ ಧನ ಸ್ವತ್ತು ಎಂದರೆ ಸರಿ. ಚನ್ನಮ್ಮ ತೀರಿಕೊಂಡ ನಂತರ ಮೃತ್ಯು ಪತ್ರದ ಪ್ರಕಾರ ಅವರ ಮಕ್ಕಳಿಗೆ ಬಂತು ಎಂದರೆ ಸರಿ. 1 ನೇ ಪ್ರತಿವಾದಿ ನಾಗಪ್ಪ ಈತನ ಮಗ. ನಾಗಪ್ಪ ತೀರಿಕೊಂಡ ನಂತರ ವಾರಸಾ ಪ್ರಕಾರವಾಗಿ 1 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳು ಬಂದವು ಎಂದರೆ ಸರಿ. ದಾವಾ ಸ್ವತ್ತುಗಳು ನಾಗಪ್ಪನಿಗೆ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿ. ನಾಗಪ್ಪ ತೀರಿಕೊಂಡ ನಂತರ 1 ನೇ ಪ್ರತಿವಾದಿ ವಾರಸಾ ಪ್ರಕಾರ ದಾವಾ ಸ್ವತ್ತುಗಳಿಗೆ ಸಂಪೂರ್ಣ ಮಾಲಿಕನಾದ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಬಗ್ಗೆ ತಿಳಿದುಕೊಳ್ಳದೇ ಪಿತ್ರಾರ್ಜಿತ ಸ್ವತ್ತುಗಳು ಅಂತಾ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ವಾದಿ 1 ನೇ ಪ್ರತಿವಾದಿಯ ಮಗಳಲ್ಲ ಹಾಗೂ ಅವಳಿಗೆ ಯಾವದೇ ಹುಟ್ಟಿದಾರಭ್ಯ ಆಸ್ತಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುಗಳ ಬಗ್ಗೆ ಏನು ಗೊತ್ತಿರದಿದ್ದರೂ ಸಹ ನನ್ನ ಹೆಂಡತಿಗೆ ದಾವಾ ಸ್ವತ್ತುಗಳಲ್ಲಿ ಭಾಗ ಕೊಡಿಸಿ ಅದರಲ್ಲಿ ನಾನು ಚೈನಿ ಮಾಡಬೇಕು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಮದುವೆ 1 ನೇ ಪ್ರತಿವಾದಿಯ ಜೊತೆ ಯಾವತ್ತು ಆಗಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮದುವೆ ಬಾರವ್ವನ ಜೊತೆ ಆಗಿದ್ದರೂ ಸಹ ನನ್ನ ಹೆಂಡತಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**1 ನೇ ಪ್ರತಿವಾದಿ ವಕೀಲರು ಮೇಲಿನ ಪಾಟಿಸವಾಲನ್ನು ಅಳವಡಿಸಿಕೊಳ್ಳುತ್ತಾರೆ ಉಳಿದ ಪ್ರತಿವಾದಿಗಳು ಗೈರು ಹಾಜರಿದ್ದು ಅವರ ಪರ ಪಾಟಿಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**(**ಶ್ರೀ ರಮೇಶ ಎಸ್ ಗಾಣಿಗೇರ**)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.